

# ನಟನೆಯ ಹಳಿಗೆ ಮರಳುತ್ತಿರುವ ಅನನ್ಯಾ

**ನಟನೆಯ ಮೂಲಕವೇ ಗುರ್ತಿಸಿಕೊಂಡಿದ್ದ ಅನನ್ಯಾ ಕಾಸರವಳ್ಳಿ, ನಂತರ ನಿರ್ದೇಶನದ ಟೋಪಿ ಧರಿಸಿದ್ದರು. ಈಗ ಮತ್ತೆ ನಟನೆ ಮತ್ತು ನಿರ್ದೇಶನ ಎರಡನ್ನೂ ಮುಂದುವರಿಸಲು ಸಿದ್ಧರಾಗಿದ್ದಾರೆ.**

■ **ಪದ್ಮನಾಭ ಭಟ್**

ಕಳೆದ ಕೆಲವು ವರ್ಷಗಳಿಂದ ಕ್ಯಾಮೆರಾ ಹಿಂದಿನ ಕೆಲಸಗಳಲ್ಲಿ ಮುಳುಗಿಹೋಗಿದ್ದ ಅನನ್ಯಾ ಕಾಸರವಳ್ಳಿ ಮತ್ತೆ ನಟನೆಯ ಫ್ರೇಮಿನ ಒಳಗೆ ಅಡಿ ಇಡಲು ನಿರ್ಧರಿಸಿದ್ದಾರೆ.

ಟೀವಿ ಧಾರಾವಾಹಿಗಳು, ಸಿನಿಮಾ ನಟನೆಯ ಮೂಲಕ ಕನ್ನಡಿಗರಿಗೆ ಪರಿಚಿತರಾಗಿದ್ದ ಅನನ್ಯಾ, 'ಹರಿಕಥಾ ಪ್ರಸಂಗ' ಎಂಬ ಸೂಕ್ಷ್ಮ ಸಂವೇದನೆಯ ಸಿನಿಮಾ ಮೂಲಕ ನಿರ್ದೇಶಕಿಯಾಗಿ ಅನನ್ಯತೆಯ ಸಹಿ ಹಾಕಿದ್ದರು. ನಿರ್ದೇಶನದ ರುಚಿ ಹತ್ತಿಸಿಕೊಂಡ ಅವರು ನಟನೆಯನ್ನು ಮರೆತುಬಿಟ್ಟರೆ ಎಂಬ ಸಂದೇಹ ಹುಟ್ಟುವಾಗಲೇ ಅವರು ಕ್ಯಾಮೆರಾ ಎದುರಿಗೆ ಬರಲು ನಿರ್ಧರಿಸಿದ್ದಾರೆ. ಇದರ ಸೂಚನೆಯಾಗಿಯೇ ಇತ್ತೀಚೆಗೆ ಜೀ ವಾಹಿನಿಯ 'ಪಾರು' ಧಾರಾವಾಹಿಯಲ್ಲಿಯೂ ಒಂದು ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ.

ಮತ್ತೆ ನಟನೆಗೆ ಮರಳಲು ನಿರ್ಧರಿಸಿದ್ದಕ್ಕೆ ಏನು ಕಾರಣ ಎಂದು ಕೇಳಿದರೆ, 'ನಟನೆ ಒಮ್ಮೆ ಅಂಟಿದರೆ ಬಿಡುವುದಿಲ್ಲ' ಎಂದು ನಗುತ್ತಾರೆ.

'ನಾನು ಮೊದಲಿನಿಂದಲೂ ರಂಗಭೂಮಿ, ಕಿರುತೆರೆಗಳಲ್ಲಿ ಸಾಕಷ್ಟು ಅಭಿನಯ ಮಾಡಿದ್ದೇನೆ. ಆ ಕೆಲಸ ನನಗೆ ತುಂಬಾ ಖುಷಿಯನ್ನೂ ಕೊಡುತ್ತದೆ. ಈ ಐದು ಆರು ವರ್ಷಗಳ ಕಾಲ ನಟನೆಯಿಂದ ದೂರ ಉಳಿಯಬೇಕಾಯ್ತು. ಈಗ ಮತ್ತೆ ನಟಿಸಬೇಕು ಅನಿಸುತ್ತಿದೆ' ಎಂದು ಹೇಳುವ ಅನನ್ಯಾ, 'ಹಾಗೆಂದು ನಿರ್ದೇಶನವನ್ನು ಬಿಡುವುದಿಲ್ಲ. ಅದನ್ನೂ ಮುಂದುವರಿಸುತ್ತೇನೆ' ಎಂದು ಹೇಳಲು ಮರೆಯುವುದಿಲ್ಲ.

ಕಿರುತೆರೆ, ಸಿನಿಮಾ ಯಾವುದೇ ಕಡೆಯಿಂದ ತನಗೆ ಒಪ್ಪಿಗೆಯಾಗುವ ಪಾತ್ರಗಳು ಬಂದರೆ ನಟಿಸುತ್ತೇನೆ ಎನ್ನುವ ಅವರಿಗೆ ಕಿರುತೆರೆಯ ಕುರಿತು ಗುಲಗಂಜಿಯಷ್ಟು ಹೆಚ್ಚೇ ಮಮಕಾರ ಇರುವಂತಿದೆ.

'ಕಿರುತೆರೆಯಲ್ಲಿಯೇ ಹೆಚ್ಚು ನಟಿಸಿರುವುದರಿಂದ ನನಗೆ ಅದೇ ಹೆಚ್ಚು ಖುಷಿಕೊಡುತ್ತದೆ. ಹಾಗಂತ ಸಿನಿಮಾದಲ್ಲಿ ನಟಿಸುವುದಿಲ್ಲ ಎಂದೇನೂ ಇಲ್ಲ. ಸರಿಹೊಂದುವ ಪಾತ್ರ ಸಿಕ್ಕರೆ ಖಂಡಿತ ನಟಿಸುತ್ತೇನೆ' ಎನ್ನುವುದು ಅವರ ವಿವರಣೆ.

ಸದ್ಯಕ್ಕೆ ಅನನ್ಯಾ 'ಮನೆ ಮನೆ ಕಥೆ' ಎಂಬ ಹೆಸರಿನ 20 ಕಿರುಸಿನಿಮಾಗಳ ದೊಡ್ಡ ಯೋಜನೆಯೊಂದರಲ್ಲಿ ತೊಡಗಿಕೊಂಡಿದ್ದಾರೆ. 'ಕರ್ನಾಟಕ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ'ಗಾಗಿ ತಯಾರಿಸಿಕೊಡುತ್ತಿರುವ ಈ ಕಿರುಸಿನಿಮಾ ಸರಣಿಯನ್ನು ಮೊದಲು ಆರಂಭಿಸಿದ್ದು ಅನನ್ಯಾ ಅವರ ತಂದೆ ಗಿರೀಶ ಕಾಸರವಳ್ಳಿ. ಈಗಲೂ ಅವರೇ ಈ ಯೋಜನೆಯ ಪ್ರಧಾನ ನಿರ್ದೇಶಕರು. ಸಂಚಿಕೆ ನಿರ್ದೇಶನದ ಹೊಣೆಯನ್ನು ಅನನ್ಯಾ ನಿರ್ವಹಿಸುತ್ತಿದ್ದಾರೆ.

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ನಿರ್ದೇಶಕಿಯಾಗಿದ್ದ ಉಮಾ ಮಹಾದೇವನ್ ಅವರು ಈ ಯೋಜನೆಯನ್ನು ಪ್ರಾರಂಭಿಸಿದ್ದು. 'ಹಸೀನಾ', 'ಗುಲಾಬಿ ಟಾಕೀಸ್'ನಂಥದ್ದೇ ಒಂದು ಸಿನಿಮಾ ಮಾಡಿಕೊಡಿ. ಅದು ನಮ್ಮ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಯೋಜನೆಗಳನ್ನೂ ಪ್ರತಿನಿಧಿಸುವ ಹಾಗಿರಲಿ ಎಂದು ಅವರು ಗಿರೀಶ ಕಾಸರವಳ್ಳಿ ಅವರನ್ನು ಕೇಳಿದ್ದರಂತೆ. ಈ ಕುರಿತು ಸಾಕಷ್ಟು ಚರ್ಚೆ ನಡೆಸಿದ ನಂತರ 20 ಕಿರು ಸಿನಿಮಾಗಳನ್ನು ತಯಾರಿಸುವ ಯೋಜನೆ ರೂಪುಗೊಂಡಿದ್ದು. ಅದು ಒಂದು ಸ್ವತಂತ್ರ ಸಿನಿಮಾದ ರೀತಿಯೂ ಇರಬೇಕು; ಹಾಗೆಯೇ ಇಲಾಖೆಯ ಯೋಜನೆಗಳನ್ನೂ ಬಿಂಬಿಸುವಂತಿರಬೇಕು ಎನ್ನುವುದು ಒಟ್ಟಾರೆ ಚೌಕಟ್ಟಾಗಿತ್ತು. ಈ ಸರಣಿಯ ಮೊದಲ ಕೆಲವು ಸಿನಿಮಾಗಳನ್ನು ಗಿರೀಶ ಕಾಸರವಳ್ಳಿ ಅವರೇ ನಿರ್ದೇಶಿಸಿದ್ದರು. ನಂತರದ ಸಿನಿಮಾಗಳನ್ನು ಅನನ್ಯಾ ನಿರ್ದೇಶಿಸುತ್ತಿದ್ದಾರೆ.